ದಿನಾಂಕಃ 13-09-2022 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ.10 ಮತ್ತು 11 ರ ಆದೇಶಗಳ ಮೇರೆಗೆ ಸಾಕ್ಷಿಯನ್ನು ಪಾಟೀ ಸವಾಲಿಗೋಸ್ಕರ ಮರಳಿ ಕರೆಯಲಾಗಿದೆ .

ದಿನಾಂಕಃ 27-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಪಿ.ಆರ್.ಕೆ ವಕೀಲರಿಂದಃ

ನನ್ನ ಸಂಪೂರ್ಣ ಹೆಸರು ನಾಗನಗೌಡ ತಿರಕನಗೌಡ ರಾಮನಗೌಡ್ರ

ಆಗಿದೆ . ನಮ್ಮ ಮೂಲತಃ ಊರು ಹಾವೇರಿ ಜಿಲ್ಲೆ , ಹಾವೇರಿ ತಾಲ್ಲೂಕಿನ ಗೂಯಿಲಗುಂದಿ ಗ್ರಾಮ ಆಗಿದೆ . ನನಗೆ ಈ ಅರ್ಜಿಯ ಅರ್ಜಿದಾರರು ಹಾಗು ಎದುರುದಾರರು ಹಾಗು ಅವರ ಕುಟುಂಬ ಹಾಗು ಕುಟಂಬದ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. 2010 ರಿಂದ ಇಲ್ಲಿಯವರೆಗೆ ನಾನು ರಾಣೇಬೆನ್ನೂರಿಗೆ 2 ದಿನಕ್ಕೆ ಒಮ್ಮೆ ಅಥವಾ 10 ದಿನಕ್ಕೆ ಒಮ್ಮೆ ಬಂದು ಹೋಗಿದ್ದೇನೆ. ದಿಃ18-04-2012 ರಂದು ನಾನು ರಾಣೇಬೆನ್ನೂರಿಗೆ ಬಂದಿದ್ದೆ. ದಿಃ18-04-2012 ರಂದು ನಾನು ಅಮ್ಮವ್ವ ರ ಕಾಗದ ಮಾಡಿಸುವುದು ಇತ್ತು ಎನ್ನುವ ಕಾರಣಕ್ಕೆ ನಾನು ರಾಣೇಬೆನ್ನೂರಿಗೆ ಬಂದಿದ್ದೆ.

ಈ ಅರ್ಜಿಯ ಅರ್ಜಿದಾರ ಹಾಗು ಎದುರುದಾರರ ಮಧ್ಯ ರಾಣೇಬೆನ್ನೂರಿನ ಕಿರಿಯ ಶ್ರೇಣಿ , ಹಿರಿಯ ಶ್ರೇಣಿ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ದಾವೆಗಳು ಚಾಲ್ತಿಯಲ್ಲಿ ಇವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ಓ.ಎಸ್ ನಂ.172/2012 ರ ದಾವೆಯನ್ನು ಯಾರು ಯಾರ ವಿರುದ್ಧ ಯಾವ ಕಾರಣಕ್ಕಾಗಿ ಸಲ್ಲಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಚನ್ನಮ್ಮ ರವರು ತನ್ನ ಹೊಟ್ಟೆಪಾಡಿಗೆ ಹಾಗು ಮಕ್ಕಳಿಗೊಸ್ಕರ

ಆಸ್ತಿಯನ್ನು ಮಾಡಿ ಕೊಡುತ್ತೇನೆ ನೀವು ಸಬ್ ರಿಜಿಸ್ಟರ್ ಆಫೀಸ್ ಗೆ ಬರಬೇಕು ಎಂದು ನನ್ನನ್ನು ಕರೆಯಿಸಿದ್ದರು ಉತ್ತರಿಸುತ್ತಾರೆ. ಸಬ್ ರಿಜಿಸ್ಟರ್ ಆಫೀಸ್ ನಲ್ಲಿ ಅವರು ಮೃತ್ಯು ಪತ್ರವನ್ನು ಬರೆದು ಕೊಟ್ಟಿದ್ದಾರೆ ನಾನು ಅದಕ್ಕೆ ಅಲ್ಲಿಯೇ ಸಹಿ ಮಾಡಿದ್ದೇನೆ . ಸದರಿ ಸಬ್ ರಿಜಿಸ್ಟರ್ ಆಫೀಸ್ ನಲ್ಲಿ 1) ಚೆನ್ನಮ್ಮ , 2) ನಾನು , 3) ಮಲ್ಲಮ್ಮ , 4) ಗೌರಮ್ಮ, 5) ನಿಂಗವ್ವ ಮತ್ತು ಎಸ್.ಎಸ್. ಕುಲರ್ಕಣಿ ಮತ್ತು ಎಸ್.ಎಸ್.ಭಟ್ ವಕೀಲರು ಮತ್ತು ಇನ್ನೊಬ್ಬ ವಕೀಲರು ಇದ್ದರು ಅವರ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ .

ನನಗೆ ಓ.ಎಸ್ ನಂ.123/2015 ರ ದಾವೆ ಇದೇ ನ್ಯಾಯಾಲಯದಲ್ಲಿ ಇತ್ತು ಎನ್ನುವ ಬಗ್ಗೆ ಮಾಹಿತಿ ಇದೆ . ಸದರಿ ಓ.ಎಸ್ ನಂ.123/2015 ರ ದಾವೆಯಲ್ಲಿ ಸದರಿ ಚೆನ್ನಮ್ಮ ಮತ್ತು ಬಸಪ್ಪ ರವರಿಗೆ ಮಾತ್ರ ಸದರಿ ದಾವೆಯ ದಾವಾ ಸ್ವತ್ತುಗಳಲ್ಲಿ ಹಕ್ಕು ಮತ್ತು ಹಿಸ್ಸೆ ಇದೆ ಎಂದು ಹಾಗು ಮಲ್ಲಮ್ಮ ಮತ್ತು ಗೌರಮ್ಮ ರವರಿಗೆ ಹಕ್ಕು ಮತ್ತು ಹಿಸ್ಸೆ ಇಲ್ಲ ಎಂದು ಆದೇಶ ಮಾಡಿದೆ ಎಂದರೆ ಸರಿಯಲ್ಲ. ಸದರಿ ಓ.ಎಸ್ ನಂ.123/2015 ರ ತೀರ್ಪಿನ ವಿರುದ್ದ ಸದರಿ ಬಸಪ್ಪನ ಮಕ್ಕಳು ರಾಣೇಬೆನ್ನೂರಿನ ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಲಯದಲ್ಲಿ ಮೇಲ್ಮನವಿಯನ್ನೂ ಸಹ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ . ಸದರಿ ಆರ್ .ಎ.ನಂ.36/2017 ರಲ್ಲಿ ಸದರಿ ಓ.ಎಸ್ ನಂ.123/2015 ರ ತೀರ್ಪನ್ನು ರಾಣೇಬೆನ್ನೂರಿನ ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎತ್ತಿಹಿಡಿದಿದೆ ಎನ್ನುವ ಕಾರಣಕ್ಕಾಗಿ ಸದರಿ ಬಸಪ್ಪನ ಮಕ್ಕಳು ಮಾನ್ಯ ಉಚ್ಛ ನ್ಯಾಯಾಲಯ , ಧಾರವಾಡ ಪೀಠದಲ್ಲಿ R.S.A ಯನ್ನು ಸಲ್ಲಿಸಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾನೆ. 2012 ರಿಂದ ಇಲ್ಲಿಯವರೆಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅನೇಕ ನ್ಯಾಯಾಲಯಗಳಲ್ಲಿ ದಾವೆಗಳು ಚಾಲ್ತಿಯಲ್ಲಿವೆ ಎನ್ನುವುದು ನನಗೆ ಗೊತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾನೆ .

ದಿಃ 18-04-2012 ರಂದು ನನಗೆ 42 ವರ್ಷ ವಯಸ್ಸು ಆಗಿತ್ತು . ನನಗೆ ಈ ಅರ್ಜಿಯ ಅರ್ಜಿದಾರಳಾದ ಚೆನ್ನಮ್ಮಳ ಗಂಡನಾದ ಹೊನ್ನಪ್ಪನ ಕುಟುಂಬದ ಬಗ್ಗೆ ಮಾತ್ರ ಮಾಹಿತಿ ಇದೆ , ಸದರಿ ಹೊನ್ನಪ್ಪನ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ . ಸದರಿ ಹೊನ್ನಪ್ಪ ಯಾವಾಗ ಮರಣ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಚೆನ್ನಮ್ಮನಿಗೆ

ಸದರಿ ಆಸ್ತಿಗಳು ಹೇಗೆ ಬಂದಿವೆ ಎನ್ನುವುದು ನನಗೆ ಗೊತ್ತು , ಸದರಿ ಆಸ್ತಿಗಳು ಆಕೆಗೆ ಆಕೆಯ ಗಂಡನ ಮನೆಯಿಂದ ಬಂದಂತಹ ಆಸ್ತಿಗಳು ಆಗಿವೆ . ಸದರಿ ಚೆನ್ನಮ್ಮನಿಗೆ ಸದರಿ ಆಸ್ತಿಗಳು ಹೇಗೆ ಬಂದಿವೆ ಎನ್ನುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ .

ಸದರಿ ಚೆನ್ನಮ್ಮ ಮತ್ತು ಚೆನ್ನಮ್ಮನ ಮಗನಾದ ಬಸಪ್ಪ (1 ನೇ ಎದುರುದಾರ) ರವರ ಸಂಬಂಧ ತುಂಬಾ ಅನ್ಯೂನ್ಯವಾಗಿತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
*ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.*